# ಪ್ರಯತ್ನ ಸಾಧನೆಯ ಮೆಟ್ಟಿಲು

■ ಅರುಣ್ ಕಿಲ್ಲೂರು



ತೇನ್ ಸಿಂಗ್ ನೋರ್ಗೆ ಅವರ ಹೆಸರನ್ನು ಬಹುತೇಕ ಎಲ್ಲರೂ ಕೇಳಿರುತ್ತಾರೆ. ನೇಪಾಳ ಮೂಲದ ಇವರು ಪ್ರಪಂಚದ ಅತೀ ಎತ್ತರದ ಪರ್ವತವಾದ ಮೌಂಟ್ ಎವರೆಸ್ಟ್ ಅನ್ನು ನ್ಯೂಜಿಲೆಂಡಿನ ಎಡ್ಮಂಡ್ ಹಿಲರಿ ಜೊತೆಗೆ ಏರಿದ ಮೊದಲ ಸಾಹಸಿ ಎನ್ನುವ ಹೆಗ್ಗಳಿಕೆ ಹೊಂದಿದವರು. ತುಂಬಾ ಸಾಹಸ ಮನೋಭಾವದ ತೇನ್‌ಸಿಂಗ್ ಬದುಕು ಸತತ ಪ್ರಯತ್ನ ಮಾಡುವವರಿಗೆ ಮಾತ್ರ ಯಶಸ್ಸು ಸಿಗುತ್ತದೆ ಎನ್ನುವುದನ್ನು ನಿರೂಪಿಸುತ್ತದೆ.

ಹುಟ್ಟು ಸಾಹಸಿ ಆಗಿದ್ದ ತೇನ್‌ಸಿಂಗ್ ತನ್ನ 19ನೇ ವಯಸ್ಸಿನಲ್ಲಿ ಮೌಂಟ್ ಎವರೆಸ್ಟ್ ಏರಲು ಆರಂಭಿಸಿದರು. ಬ್ರಿಟಿಷರು ಮೌಂಟ್ ಎವರೆಸ್ಟ್ ಶಿಖರದ ಎತ್ತರವನ್ನು ಅಳೆಯಲು ಮುಂದಾದ ಸಂದರ್ಭ ತೇನ್‌ಸಿಂಗ್‌ಗೆ ಪರ್ವತಾರೋಹಣ ಮಾಡುವ ಅವಕಾಶ ಲಭಿಸಿತು. 1930ರ ಸುಮಾರಿಗೆ 3 ಬಾರಿ ಮೌಂಟ್ ಎವರೆಸ್ಟ್ ಏರುವ ಯತ್ನ ಮಾಡಿದ ತೇನ್‌ಸಿಂಗ್ ಈ ಪ್ರಯತ್ನದಲ್ಲಿ ವಿಫಲರಾದರು. ಆದರೆ ಇದರಿಂದ ಅವರಿಗೆ ಪರ್ವತ ಹತ್ತುವ ಹುಚ್ಚು ಕಡಿಮೆ ಆಗಲಿಲ್ಲ. ಮತ್ತೆ ಪ್ರಯತ್ನ ಮುಂದುವರೆಸುತ್ತಾ ಹೋದರು.

1947ರಲ್ಲಿ ಭಾರತ ವಿಭಜನೆ ಆದ ಸಂದರ್ಭದಲ್ಲಿ ತೇನ್‌ಸಿಂಗ್ ಭಾರತದ ಡಾರ್ಜಿಲಿಂಗ್‌ಗೆ ಬಂದು ನೆಲೆಸಿದರು. ಮೌಂಟ್ ಎವರೆಸ್ಟ್ ಪರ್ವತವನ್ನು ಏರುವ ಸಾಹಸ ಮುಂದುವರೆಸುತ್ತಲೇ ಇದ್ದರು.

ಕೊನೆಗೂ ತೇನ್‌ಸಿಂಗ್ ಏಳು ಬಾರಿ ಪರ್ವತ ಏರುವ ಪ್ರಯತ್ನ ವಿಫಲ ಆದ ಬಳಿಕ 1953ರ ಮೇ 29ರಂದು ಎಡ್ಮಂಡ್ ಹಿಲರಿ ಜೊತೆಗೆ ಮೌಂಟ್ ಎವರೆಸ್ಟ್ ಏರುವಲ್ಲಿ ಸಫಲರಾದರು. ಈ ಮೂಲಕ ಸತತ ಪ್ರಯತ್ನದ ಮೂಲಕ ಏನನ್ನೂ ಸಾಧಿಸಬಹುದು ಎನ್ನುವುದನ್ನು ತೇನ್‌ಸಿಂಗ್ ಜಗತ್ತಿಗೆ ಸಾಧಿಸಿ ತೋರಿಸಿದರು.

ತೇನ್‌ಸಿಂಗ್ ಸಾಧನೆ ಒಂದು ದಿನದಲ್ಲಿ ಬರಲಿಲ್ಲ. ಪರ್ವತ ಹತ್ತುವ ಕೆಲಸವನ್ನು ಅವರು ನಿರಂತರವಾಗಿ ಪ್ರೀತಿಸುತ್ತಾ ಹೋದರು. ಅವರ ಪ್ರಯತ್ನದ ಫಲವಾಗಿ ಮೂಟೆ ಹೊರುವ ಕೂಲಿಯಿಂದ ಪರ್ವತ ಏರಿ ಪದಕಧಾರಿ ಕೋಟ್ ಧರಿಸುವ ಸಾಧನೆಗೆ ಕಾರಣವಾಯಿತು.

ತೇನ್‌ಸಿಂಗ್ ವೈಯಕ್ತಿಕ ಬದುಕಿನಲ್ಲಿ ಬಹಳ ನೋವಿತ್ತು. ಅವರ ಇಬ್ಬರು ಮಡದಿಯರು ಅಕಾಲಿಕವಾಗಿ ಸತ್ತರು. ಆದರೆ ವೈಯುಕ್ತಿಕ ಬದುಕಿನ ನೋವು ಮೆಟ್ಟಿ ನಿಂತು ತೇನ್ ಸಿಂಗ್ ಗುರಿಯ ಕಡೆಗೆ ದೃಷ್ಟಿ ನೆಟ್ಟು ಗುರಿ ಸಾಧಿಸಿದರು. ಅವರ ಸಾಧನೆ ನೇಪಾಳದ ಹುಲ್ಲುಗಾವಲು ಪ್ರದೇಶದಿಂದ ಬ್ರಿಟನ್ ರಾಣಿಯ ಬಕಿಂಗ್‌ಹ್ಯಾಮ್ ಅರಮನೆವರೆಗೂ ಕರೆದುಕೊಂಡು ಹೋಯಿತು. 20ನೇ ಶತಮಾನದ 100 ಮಂದಿ ಪ್ರಭಾವಿಗಳಲ್ಲಿ ತೇನ್ ಸಿಂಗ್ ಒಬ್ಬರು ಎಂದು ಗುರುತಿಸಿಕೊಂಡರು. 1986ರಲ್ಲಿ ತೇನ್ ಸಿಂಗ್ ನಿಧನರಾದರು. ಆದರೆ ಅವರ ಜೀವನ ಅಸಾಧ್ಯವನ್ನು ಸಾಧಿಸಲು ಹೊರಡುವ ಸಾಧಕರಿಗೆ ಸತತ ಪ್ರಯತ್ನದ ಪಾಠ ಹೇಳುತ್ತದೆ. ■

# ಮರ

■ ಕಿಗ್ಗಾಲು ಜಿ. ಹರೀಶ್

ಎಳೆಯ ಬಳ್ಳಿಯೊಂದು ಮರವ
ಬಳಸಿ ಮುಗಿಲು ಮುಟ್ಟಿದೆ
ಪುಷ್ಪವೊಂದು ಅರಳಿ ನಿಂತು
ಸುತ್ತಲೆಲ್ಲ ನವಿರು ಕಂಪು ಬೀರಿದೆ

ಹಕ್ಕಿಯೊಂದು ಹಣ್ಣಿನೊಡನೆ ಬೀಜ ನುಂಗಿ
ಹಾರಿಹೋಗಿ ದೂರದಲ್ಲಿ ಹಿಕ್ಕೆ ಹಾಕಿದೆ
ಬೀಜ ಮೊಳಕೆಯೊಡೆದು ಚಿಗುರಿ
ಹಸಿರ ಸೀರೆ ಭೂಮಿಯನ್ನೆ ಸುತ್ತಿದೆ

ಮರಗಳೀಗ ಎಲ್ಲ ಪ್ರಾಣಿ ಪಕ್ಷಿಗಳಿಗೆ
ಹಣ್ಣು ಗೂಡು ಕೊಟ್ಟು ಸಲಹಿದೆ
ಕಡಿಯುವವರ ತಡೆದು ನೀನು
ಮರದ ಜೀವ ಉಳಿಸಬೇಕಿದೆ

ಗಾಳಿ ಬಿಸಿಲು ಮಳೆಯು ಚಳಿಯು
ಏನೆ ಬರಲು ಮರಗಳಿಂದು ಉಳಿದಿವೆ
ಬರವು ಬರಲಿ ನೆರೆಯು ಬರಲಿ
ಮರವು ಉಳಿಯೆ ನಿನ್ನ ಬದುಕಿದೆ

ಹಿಂದೆ ಯಾರೊ ನೆಟ್ಟ ಮರವು
ಇಂದು ಗಾಳಿ ನೀರು ನೀಡಿದೆ
ನಾಳೆ ಬದುಕಿಗಾಗಿ ನೀನು ಈಗ
ನಾಲ್ಕು ಗಿಡವ ನೆಡಲೆ ಬೇಕಿದೆ ■



ವಿಜಯಕುಮಾರಿ